O.S. ನಂಬರಃ 24/2019
ಪಿ. ಡಬ್ಲ್ಯೂಃ 1

ದಿಃ 20-01-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ಇವರಿಂದಃ

ನೀವು ಹಾಜರುಪಡಿಸಿದ ನಿಪಿ-9 ವಂಶಾವಳಿಯ ಸಲುವಾಗಿ ನೀಡಿದ ಅರ್ಜಿಯನ್ನು ಯಾರಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ತಹಶೀಲ್ದಾರ ಕಚೇರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-9 ಮೂಲ ಪ್ರತಿ ಎಂದರೆ ಸರಿ. ಸದರಿ ದಾಖಲೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಸಹಿಯಾಗಲಿ ಅಥವಾ ಕಂದಾಯ ನಿರೀಕ್ಷಕರ ಸಹಿಯಾಗಲಿ ಅಥವಾ ತಹಶೀಲ್ದಾರ ಮತ್ತು ಉಪತಹಶೀಲ್ದಾರ ಇವರ ಸಹಿಯಾಗಲಿ ಇರುವುದಿಲ್ಲ ಹಾಗೂ ತಾವು ಸದರಿ ದಾಖಲೆಯನ್ನು ತಹಶೀಲ್ದಾರ ಕಚೆಯಿಂದ ಪಡೆದುಕೊಂಡಿದ್ದರ ಬಗ್ಗೆ ಯಾವುದೇ ಹಿಂಬರಹ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಾನು ಸಹಿ ಇಲ್ಲದಿರುವುದನ್ನು ಈವಾಗಲೇ ನೋಡುತ್ತಿದ್ದೇನೆ. ಸದರಿ ಅರ್ಜಿಯನ್ನು ನೀವೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಸದರಿ ಅರ್ಜಿಯನ್ನು ನೀವು ತಹಶೀಲ್ದಾರ ಇವಗೆ ಕೊಟ್ಟ ನಂತರ ನಿಮ್ಮ ತಾಬಾದಲ್ಲಿ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯು ಪಡೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಮೇಲೆ

ಯಾವುದೇ ದಿನಾಂಕ ನಮೂದು ಮಾಡಿದ್ದು ಇರುವುದಿಲ್ಲ ಎಂದರೆ ಸರಿ. ಸದರಿ ಅರ್ಜಿಯನ್ನು ನೀವೇ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ವಂಶಾವಳಿಯ ಬಗ್ಗೆ ಪ್ರಮಾಣ ಪತ್ರವನ್ನು ಪಡೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾಗ ಪ್ರಮಾಣ ಪತ್ರವನ್ನು ಮಾಡಿರುತ್ತೀರಿ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಪಿ-10 ವಂಶಾವಳಿ ಶರಾವನ್ನು ಪ್ರಮಾಣ ಪತ್ರದ ಆಧಾರದ ಮೇಲೆ ಕೊಟ್ಟಿರುತ್ತಾರಾ ಅಥವಾ ಬೇರೆ ಯಾವುದಾದರೂ ದಾಖಲಾತಿಯ ಆಧಾರದ ಮೇಲೆ ಕೊಟ್ಟಿರುತ್ತಾರೋ ಎಂದರೆ ಸಾಕ್ಷಿಯು ಪ್ರಮಾಣ ಪತ್ರದ ಆಧಾರದ ಮೇಲೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ವಂಶಾವಳಿಯನ್ನು ಪ್ರಮಾಣ ಪತ್ರದ ಆಧಾರದ ಮೇಲೆ ಕೊಡಲಾಗಿದೆ ಎಂದು ಉಲ್ಲೇಖ ಮಾಡಿದ್ದು ಇರುವುದಿಲ್ಲ ಎಂದರೆ ಸರಿ. ವಂಶಾವಳಿ ಶರಾವನ್ನು ಕೊಡಬೇಕಾದರೆ ಗ್ರಾಮ ಲೆಕ್ಕಾಧಿಕಾರಿಗಳು ಯಾರ ಯಾರ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ನಿಮಗೇನೂ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಸುರೇಖಾ ನಾಯಕ ಇವರ ಸಹಿ, ಅವರ ಪತಿಯ ಸಹಿ ಹಾಗೆ ಇನ್ನೊಬ್ಬರ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಗ್ರಾಮ ಆಡಳಿತ ಲೆಕ್ಕಾಧಿಕಾರಿಗಳು ಸ್ಥಳೀಯರನ್ನು ಚೌಕಾಸಿ ಮಾಡಿದ್ದಾಗಲಿ ಅಥವಾ ಅವರ ಸಹಿಗಳನ್ನು ಪಡೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಸಹಾಯ ಮಾಡಲು ಸುಳ್ಳು ವಂಶಾವಳಿಯ ಶರಾವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ರಾಧಾರಾಯ ನಾಯ್ಕ ಇವರು ಮರಣಪಟ್ಟ ನಂತರ ತಹಶೀಲ್ದಾರ ಕಚೇರಿಯಿಂದ

ಬದುಕುಳಿದವರ ಪ್ರಮಾಣ ಪತ್ರವನ್ನೆನಾದರೂ ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಂಶಾವಳಿಯಲ್ಲಿ ತೋರಿಸಿದ ರಾಧಾರಾಯ ನಾಯ್ಕ ಇವರ ವಾರಸುದಾರರು ಅವರೇ ಎಂದು ತೋರಿಸಲು ನಿಮ್ಮ ಹತ್ತಿರ ಬೇರೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸಾಕ್ಷಿಯು ರೇಷನ್ ಕಾರ್ಡ ಇದ್ದಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ತಾಯಿಯವರ ರೇಷನ್ ಕಾರ್ಡ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಅದನ್ನು ಹಾಜರುಪಡಿಸಲು ಏನೂ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಅದು ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮಂದುವರೆದು ಅದರ ಪ್ರತಿ ಇದ್ದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ವಂಶಾವಳಿಯಲ್ಲಿ ತೋರಿದ ರಾಧಾರಾಯ ನಾಯ್ಕ ಇವರ ವಾರಸುದಾರರ ಆಧಾರ ಕಾರ್ಡ ಇವೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅವರ್ಯಾರೂ ರಾಧಾರಾಯ ನಾಯ್ಕ ಇವರ ವಾರಸುದಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

C/c. ಸಿವಿಲ್ ನ್ಯಾಯಾಧೀಶರು, ಅಂಕೋಲಾ.